







# ವಿಶಾಖಪಟ್ಟಣ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯಕ್ರಮಗಳು

**ಶೈಕ್ಷಣಿಕ ಕಾರ್ಯಾಗಾರ:** ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಮಹೋತ್ಸವದ ಆಚರಣೆಯ ಸಲುವಾಗಿ ವಿಶಾಖಪಟ್ಟಣಂ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೆಪ್ಟೆಂಬರ್ ೨೦ರಿಂದ ೨೩ರ ವರೆಗೆ **ಶೈಕ್ಷಣಿಕ ಕಾರ್ಯಾಗಾರವು** ನಡೆಯಿತು. ದಿನಾಂಕ ೨೦ರಂದು ಈ ಕಾರ್ಯಾಗಾರವನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ **ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್** ಅವರು ಉದ್ಘಾಟಿಸಿದರು. ಅಧ್ಯಾಪಕರಿಗಾಗಿ ನಡೆದ ಒಂದು ದಿನದ ವಿಚಾರ ಸಂಕಿರಣದಲ್ಲಿ ಸುಮಾರು ೩೫೦ ಮಂದಿ ಅಧ್ಯಾಪಕರು ಭಾಗವಹಿಸಿದರು. ಅನಂತರ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಡೆದ **ಯುವ ಸಮ್ಮೇಳನ ಶಿಬಿರ**ದಲ್ಲಿ ಸುಮಾರು ೧೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ದಿನಗಳಲ್ಲಿ ಪ್ರಸಿದ್ಧ ವಾಗ್ಮಿಗಳು ನೆರೆದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ವಿವಿಧ ಯುವ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು.

**ವಸ್ತುಪ್ರದರ್ಶನದ ಉದ್ಘಾಟನೆ:** ೨೦೧೭ರ ಸೆಪ್ಟೆಂಬರ್ ೧೮ರಂದು ಸಮಗ್ರವಾಗಿ ನವೀಕರಣಗೊಳಿಸಿದ ದಿವ್ಯತ್ರಯರ ಸಣ್ಣಗಾತ್ರದ ಬೊಂಬೆ ಪ್ರದರ್ಶನದ ಉದ್ಘಾಟನೆಯನ್ನು ಶ್ರೀಮತ್ ಸ್ವಾಮಿ ಗೌತಮಾನಂದಜಿ ಯವರು ನೆರವೇರಿಸಿದರು. ಈ ಪ್ರದರ್ಶನವನ್ನು ೧೯೯೭ರಲ್ಲಿ ಆರಂಭಿಸಲಾಗಿತ್ತು. ಪಶ್ಚಿಮ ಬಂಗಾಳದ ಕೃಷ್ಣನಗರದ ಕಲಾವಿದರು ಈ ಬೊಂಬೆಗಳನ್ನು ತಯಾರಿಸಿದ್ದರು. ಈ ಬಾರಿ ಆ ಕಲಾವಿದರಿಂದಲೇ ಇದರ ನವೀಕರಣವನ್ನು ಮಾಡಿ, ಹೊಸ ಮೆರಗನ್ನು ನೀಡಲಾಯಿತು.

# ಮಂಗಳೂರು ರಾಮಕೃಷ್ಣ ಮಠದಲ್ಲಿ ೩ ದಿನಗಳ ವಿಚಾರ ಸಂಕಿರಣ

ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ೧೨೫ನೇ ವರ್ಷದ ಸಂಸ್ಮರಣಾರ್ಥ ಮಂಗಳೂರು ರಾಮಕೃಷ್ಣ ಮಠವು ಮೂರು ದಿನಗಳ ವಿಚಾರ ಸಂಕಿರಣ **'ಪ್ರಜ್ಞಾ-ಶ್ರದ್ಧಾ-ಮೇಧಾ'**ವನ್ನು ಸೆಪ್ಟೆಂಬರ್ ೭ ರಿಂದ ೯ರ ವರೆಗೆ ಏರ್ಪಡಿಸಿತ್ತು. ಕಾಲೇಜು ಅಧ್ಯಾಪಕರಿಗಾಗಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಹಾಗೂ ಬಿ.ಎಡ್. ವಿದ್ಯಾರ್ಥಿಗಳಿಗಾಗಿ ನಡೆಸಲಾದ ಈ ಸಂಕಿರಣಗಳಲ್ಲಿ ಸುಮಾರು ೧೩೦೦ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕರ್ನಾಟಕ ಸರ್ಕಾರದ ಯುವ ಹಾಗೂ ಕ್ರೀಡಾ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್ ಅವರು ಸೆಪ್ಟೆಂಬರ್ ೮ರಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಂಕಿರಣಗಳಲ್ಲಿ ಸ್ವಾಮಿ ಶಾಂತಾತ್ಮಾನಂದಜಿ, ಶ್ರೀ ವಿ.ಶ್ರೀನಿವಾಸ್ ಪ್ರೊ.ರಘೋತ್ತಮ್ ರಾವ್, ಸ್ವಾಮಿ ಆತ್ಮಜ್ಞಾನಂದಜಿ, ಕಜಂಪಾಡಿ ಸುಬ್ರಹ್ಮಣ್ಯ ಭಟ್, ಸುರೇಶ್ ಕುಲಕರ್ಣಿ ಹಾಗೂ ಶ್ರೀಮತಿ ಚಿಂತನಾ ರಾಜೇಶ್ ಮೊದಲಾದ ಗಣ್ಯರು ವಿಷಯಮಂಡನೆ ಮಾಡಿ ಮಾತನಾಡಿದರು. ಶಿಬಿರಾರ್ಥಿಗಳಿಗೆ ಭೋಜನವ್ಯವಸ್ಥೆ ಹಾಗೂ ಪುಸ್ತಕ, ಪ್ರಮಾಣಪತ್ರಗಳ ವಿತರಣಾ ವ್ಯವಸ್ಥೆ ಮಾಡಲಾಗಿತ್ತು.









Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020